# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ಸಂಖ್ಯೆ:ಕರಾಮುವಿ/ಪವಿ/5.1/ಹ.ವಿ.ಪ/11/2023-24 ದಿನಾಂಕ:-02-11-2023

## ಪರೀಕ್ಷಾ ಅಧಿಸೂಚನೆ

ವಿಷಯ:- 2001-02 ರಿಂದ 2012-13ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಅನುತ್ತೀರ್ಣರಾಗಿರುವ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಒಂದು ಬಾರಿ ಪರೀಕ್ಷೆಯನ್ನು ಬರೆಯಲು ಅವಕಾಶ ನೀಡುವ ಬಗ್ಗೆ.

ಉಲ್ಲೇಖ:- 1. 29ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನ ದಿನಾಂಕ: 09-08-2023
2. 174ನೇ ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನ ದಿನಾಂಕ: 15-09-2023
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17-10-2023

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2001-02 ರಿಂಧ 2012-13ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದು ಅನುತ್ತೀರ್ಣರಾಗಿರುವ/ಪರೀಕ್ಷೆ ತೆಗೆದುಕೊಂಡಿಲ್ಲದ ಸ್ನಾತಕ/ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ (UG/PG) ವಿದ್ಯಾರ್ಥಿಗಳಿಗೆ 2019-20 ಮತ್ತು 202-21ನೇ ಸಾಲಿನಲ್ಲಿ ಎರಡು ಬಾರಿ ಪರೀಕ್ಷೆಯನ್ನು ಬರೆಯಲು ಅವಕಾಶ ನೀಡಲಾಗಿತ್ತು. ಪರೀಕ್ಷೆಗೆ ಹಾಜರಾಗಲು ಸಾದ್ಯವಾಗದ ಕಾರಣ ಮತ್ತೊಂದು ಅವಕಾಶ ಕೋರಿ ಹಲವು ವಿದ್ಯಾರ್ಥಿಗಳು ಮನವಿಯನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಹಾಗು ಸಾಂಕ್ರಾಮಿಕ ರೋಗ, ಅತಿವೃಷ್ಟಿ, ಪ್ರಕೃತಿ ವಿಕೋಪದಿಂದಾಗಿ ಹಾಗೂ ಇತರೆ ಕಾರಣಗಳಿಂದ ಪರೀಕ್ಷೆಗೆ ಹಾಜರಾಗಲು ಸಾದ್ಯವಾಗದ ಕಾರಣ ಮತ್ತೊಂದು ಅವಕಾಶ ಕೋರಿ ಹಲವು ವಿದ್ಯಾರ್ಥಿಗಳು ಮನವಿಯನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಉಲ್ಲೇಖ (1)ರ 29ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನ ಹಾಗು ಉಲ್ಲೇಖ(2) ರ 174ನೇ ವ್ಯವಸ್ಥಾಪನ ಮಂಡಳಿ ಸಭೆಯ ತೀಮಾನದಂತೆ ಉಲ್ಲೇಖ (3)ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಸದರಿ ಸಾಲಿನ ಅನುತ್ತೀರ್ಣರಾಗಿರುವ/ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಮತ್ತೊಂದು ಬಾರಿ ಪರೀಕ್ಷೆಯನ್ನು ಬರೆಯಲು ಅವಕಾಶ ನೀಡಿ ಪರೀಕ್ಷಾ ಶುಲ್ಕ ಪಾವತಿಗೆ ದಿನಾಂಕ ನಿಗಧಿಪಡಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

- 2001-02 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಬಿ.ಎ/ಬಿ.ಕಾಂ ಪದವಿಯ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳು.
- 2002-03 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಬಿ.ಲಿಬ್.ಐ.ಎಸ್ಸಿ ಪದವಿ ವಿದ್ಯಾರ್ಥಿಗಳು.
- 2001-02 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಬಿ.ಇಡಿ ಮತ್ತು ಎಂ.ಇಡಿ ಪದವಿ ವಿದ್ಯಾರ್ಥಿಗಳು.
- 2007-08 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಬಿ.ಇಡಿ(ವಿಶೇಷ ಶಿಕ್ಷಣ) ಪದವಿ ವಿದ್ಯಾರ್ಥಿಗಳು.
- 2001-02 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳ ವಿದ್ಯಾರ್ಥಿಗಳು.
- 2001-02 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳು.
- 2001-02 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಎಂ.ಬಿ.ಎ ಪದವಿಯ ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು.
- 2006-07 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಎಂ.ಲಿಬ್.ಐ.ಎಸ್ಸಿ ಪದವಿಯ ವಿದ್ಯಾರ್ಥಿಗಳು.
- 2010-11 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಎಲ್.ಎಲ್.ಎಂ/ಎಂ.ಟಿ.ಎಂ/ಎಂ.ಬಿ.ಎ (ಲಾ) ಪದವಿಯ ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು.
- 2010-11 ರಿಂದ 2012-13ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದ ಎಂ.ಎಸ್ಸಿ ಪದವಿಗಳ ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು

**ಸದರಿ ಪರೀಕ್ಷೆಗಳನ್ನು ಜನವರಿ- 2024ರ ಮಾಹೆಯಲ್ಲಿ ನಡೆಸಲಾಗುವುದು.**

ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.inನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ (Online) ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ 8800335638 ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ : | 10-11-2023 |
| ದಂಡ ಶುಲ್ಕವಿಲ್ಲದೆ ಪಾವತಿಗೆ ಕಡೆ ದಿನಾಂಕ : | 16-12-2023 |
| ರೂ:200/- ದಂಡ ಶುಲ್ಕದೊಂದಿಗೆ ಪಾವತಿಗೆ ಕಡೆ ದಿನಾಂಕ: | 30-12-2023 |

**ಸದರಿ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಯಾವುದೇ ರೀತಿಯ ಶುಲ್ಕ ವಿನಾಯಿತಿ ಇರುವುದಿಲ್ಲ ಹಾಗೂ ಸದರಿ ಪರೀಕ್ಷೆಗಳ ದಿನಾಂಕಗಳ ವೇಳಾಪಟ್ಟಿಯನ್ನು ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.inದಲ್ಲಿ ಮುಂದೆ ಪ್ರಕಟಿಸಲಾಗುವುದು.**

**ಈ ಕೆಳಕಂಡ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಲಾಗಿದೆ.**

<table>
<tr><td>ಬಿ.ಎ/ಬಿ.ಕಾಂ ಹಾಗೂ ಎಂ.ಎ/ಎಂ.ಕಾಂ</td><td rowspan="5">ಮೈಸೂರು, ಬೆಂಗಳೂರು, ಧಾರವಾಡ, ಕಲಬುರಗಿ, ಉಡುಪಿ</td></tr>
<tr><td>ಬಿ.ಲಿಬ್.ಐ.ಎಸ್ಸಿ., ಎಂ.ಲಿಬ್.ಐ.ಎಸ್ಸಿ</td></tr>
<tr><td>ಎಂ.ಬಿ.ಎ., ಎಲ್ಲಾ ಎಂ.ಎಸ್ಸಿ.</td></tr>
<tr><td>ಎಲ್.ಎಲ್.ಎಂ/ಎಂ.ಬಿ.ಎ(ಲಾ)/ ಎಂ.ಟಿ.ಎಂ ಸೆಮಿಸ್ಟರ್,<br>ಬಿ.ಇಡಿ/ಎಂ.ಇಡಿ/ಬಿ.ಇಡಿ.,(ವಿಶೇಷ ಶಿಕ್ಷಣ) ಪದವಿಗಳು</td></tr>
<tr><td>ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾಗಳು ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳು</td></tr>
</table>

Scanned with OKEN Scanner

## ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ಕೋಷ್ಟಕ

### ಸ್ನಾತಕ (U.G) ಪದವಿ ಕೋರ್ಸ್‌ಗಳು

| ಕ್ರಮ ಸಂಖ್ಯೆ | ಪದವಿ | ಪೂರ್ಣಪರೀಕ್ಷೆಗೆ | ಒಂದು ಪತ್ರಿಕೆಗೆ | ಎರಡು ಪತ್ರಿಕೆಗೆ | ಮೂರು ಪತ್ರಿಕೆಗೆ | ನಾಲ್ಕು ಪತ್ರಿಕೆಗೆ | ಐದು ಮತ್ತು ಅದಕ್ಕೂ ಹೆಚ್ಚಿನ ಪತ್ರಿಕೆಗಳಿಗೆ |
|---|---|---|---|---|---|---|---|
| 01 | ಬಿ.ಎ/ಬಿ.ಕಾಂ | 2550/- | 1350/- | 1500/- | 1800/- | 2100/- | 2500/- |
| 02 | ಬಿ.ಆರ್.ಐ.ಎಸ್ಸಿ | 4800/- | 1800/- | 2400/- | 3000/- | 3600/- | 4800/- |
| 03 | ಬಿ.ಎಡ್ | 4500/- | 1500/- | 2400/- | 3000/- | 3500/- | 4500/- |
| 04 | ಬಿ.ಎಡ್ (ವಿಶೇಷ ಶಿಕ್ಷಣ) | 3600/- | 1050/- | 1350/- | 1650/- | 1950/- | 3600/- |
| 05 | ಸ್ನಾತಕ ಡಿಪ್ಲೋಮಾಗಳು | 2550/- | 1200/- | 1650/- | --- | --- | 2550/- |

### ಸ್ನಾತಕೋತ್ತರ (P.G) ಪದವಿ ಕೋರ್ಸ್‌ಗಳು

| ಕ್ರಮ ಸಂಖ್ಯೆ | ಪದವಿ | ಪೂರ್ಣಪರೀಕ್ಷೆಗೆ | ಒಂದು ಪತ್ರಿಕೆಗೆ | ಎರಡು ಪತ್ರಿಕೆಗೆ | ಮೂರು ಪತ್ರಿಕೆಗೆ | ನಾಲ್ಕು ಪತ್ರಿಕೆಗೆ | ಐದು ಮತ್ತು ಅದಕ್ಕೂ ಹೆಚ್ಚಿನ ಪತ್ರಿಕೆಗಳಿಗೆ |
|---|---|---|---|---|---|---|---|
| 01 | ಎಂ.ಎ/ಎಂ.ಕಾಂ | 3600/- | 1500/- | 2100/- | 3600/- | 3600/- | --- |
| 02 | ಎಂ.ಬಿ.ಎ | 3600/- | 1800/- | 2400/- | 2700/- | 3600/- | 3600/- |
| 03 | ಎಂ.ಎಡ್ | 3600/- | 2400/- | 3600/- | 3600/- | --- | --- |
| 04 | ಎಂ.ಆರ್.ಐ.ಎಸ್ಸಿ | 4800/- | 1800/- | 2400/- | 3000/- | 3600/- | 4800/- |
| 05 | ಎಲ್.ಎಲ್.ಎಂ/ ಎಂ.ಬಿ.ಎ (ಲಾ) ಸೆಮಿಸ್ಟರ್ | 3000/- | 1500/- | 2400/- | 3000/- | --- | --- |
| 06 | ಎಂ.ಟಿ.ಎಂ ಸೆಮಿಸ್ಟರ್ | 3000/- | 1500/- | 2400/- | 3000/- | --- | --- |
| 07 | ಎಂ.ಎಸ್ಸಿ (ಸೆಮಿಸ್ಟರ್) | 6000/- | 2100/- | 3000/- | 6000/- | --- | 6000/- |
| 08 | ಸ್ನಾತಕೋತ್ತರ ಡಿಪ್ಲೋಮಾಗಳು | 3000/- | 1200/- | 1650/- | --- | --- | 3000/- |
| 08 | ಎಂ.ಬಿ.ಎ, ಎಲ್ಲಾ ಎಂ.ಎಸ್ಸಿ ಪದವಿಗಳ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳು ಪ್ರಾಜೆಕ್ಟ್, ವೈವಾ ಕಾರ್ಯಕ್ರಮಗಳಿಗೆ ರೂ.2000/-ಗಳನ್ನು ಪಾವತಿಸವುದು. | | | | | | |

### ವಿದ್ಯಾರ್ಥಿಗಳಿಗೆ ಸೂಚನೆಗಳು

01. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
02. ಪರೀಕ್ಷಾ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.
03. **ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಚಾಲ್ತಿಯಲ್ಲಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಪರೀಕ್ಷೆ ತೆಗೆದುಕೊಳ್ಳಬೇಕು.**
04. ವಿದ್ಯಾರ್ಥಿಗಳು ತಮ್ಮ ಸ್ನಾತಕ/ಸ್ನಾತಕೋತ್ತರ ಪದವಿಗಳ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಅಂತರ್ಜಾಲ **www.ksoumysuru.ac.in** ನಿಂದ ಪಡೆಯಬಹುದಾಗಿದೆ.
05. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮೊಬೈಲ್ ಫೋನ್ ಪರೀಕ್ಷಾ ಕೇಂದ್ರಗಳಿಗೆ ತರುವುದು ದುರ್ನಡತೆ **(Malpractice)**ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ.
06. **ವಿಶೇಷ ಸೂಚನೆ: ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷೆಗೆ** ತರುವುದು.
07. ಸಂಶೋಧನ ಪ್ರಬಂಧ ಮತ್ತು ಮೌಖಿಕ ಪರೀಕ್ಷೆ/ಪ್ರಾಯೋಗಿಕ ಪರೀಕ್ಷೆಯ ಬಗೆಗೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

03/11/2023

ಕುಲಸಚಿವರು(ಪರೀಕ್ಷಾಂಗ)

03.11.2023

**ಪ್ರತಿಗಳು.**

1. ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯ ಅಧಿಕಾರಿಗಳು ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಡೀನ್(ಶೈಕ್ಷಣಿಕ),ಕರಾಮುವಿ,ಮೈಸೂರು.
5. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
6. ಮುಖ್ಯಸ್ಥರು ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
7. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು, ಕರಾಮುವಿ.
8. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸುವಂತೆ ಕ್ರಮವಹಿಸುವುದು.
9. ಉಪಕುಲಸಚಿವ/ಸಹಾಯಕ ಕುಲಸಚಿವರು/ಅಧೀಕ್ಷಕರು, ಕರಾಮುವಿ, ಮೈಸೂರು.
10. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.

Scanned with OKEN Scanner